# ಕರ್ನಾಟಕ ಸರ್ಕಾರ

## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.

**ಸಿ.ಸಿ.ನಂ.1282/2023**

ಪಿ.ಡಬ್ಲ್ಯೂಃ **1**

ಸಿ.ಡಬ್ಲ್ಯೂಃ 1

| | | |
|---|---|---|
| ಹೆಸರು | ಃ | ಮಂಜುನಾಥ್ ಹೆಚ್ |
| ತಂದೆಯ ಹೆಸರು | ಃ | ಲೇಟ್ ಚಿತ್ರಶೇಖರಪ್ಪ |
| ವಯಸ್ಸು | ಃ | 31 ವರ್ಷ |
| ಉದ್ಯೋಗ | ಃ | ಪಿ ಎಸ್ ಐ ಮೆಸ್ಕಾಂ ವಿಜಿಲೆನ್ಸ್ , ಶಿವಮೊಗ್ಗ |
| ವಾಸಸ್ಥಳ | ಃ | ಶಿವಮೊಗ್ಗ |

**ದಿನಾಂಕಃ 11-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

ನಾನು ದಿಃ **22-04-2022** ರಿಂದ **31-01-2024** ರವರಗೆ ಲಕ್ಕವಳ್ಳಿ **ಪೋಲೀಸ್ ಠಾಣೆಯಲ್ಲಿ** ಪಿ ಎಸ್ ಐ **ಆಗಿ ಕರ್ತವ್ಯ** ನಿರ್ವಹಿಸುತ್ತಿದ್ದೇನೆ.

ದಿನಾಂಕಃ 03-04-2023 ರಂದು ಸಂಜೆ 7-00 ಗಂಟೆಗೆ ನಾನು ಮತ್ತು ನಮ್ಮ ಸಿಬ್ಬಂಧಿಗಳಾದ ಚಾಸಾ-4 ಮತ್ತು 5 ರವರು ಹಲಸೂರು ಗ್ರಾಮದಲ್ಲಿ ಗಸ್ತಿನಲ್ಲಿರುವಾಗ ಬಾತ್ಮಿದಾರರಿಂದ ಮಾರಿದಿಬ್ಬ ಗ್ರಾಮದಲ್ಲಿ ಮಂಜುನಾಥ ಬಿನ್ ರಾಮಸ್ವಾಮಿ ಎಂಬುವವರು ಮನೆಯ ಮುಂಭಾಗದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂಬ ಮಾಹಿತಿ ಬಂದಿದ್ದು, ಮಾಹಿತಿಯನ್ನು ಸಿಬ್ಬಂದಿಗಳಿಗೆ ತಿಳಿಸಿ ಹಲಸೂರು ಗ್ರಾಮವನ್ನು ಬಿಟ್ಟು ಮಾರಿದಿಬ್ಬಕ್ಕೆ ಸಂಜೆ 7-10 ಗಂಟೆಗೆ ತಲುಪಿದ್ದು, ಅಲ್ಲಿ ಬಸ್ ನಿಲ್ದಾಣದಲ್ಲಿ ಚಾಸಾ-2 ಮತ್ತು 3 ರವರನ್ನು ಪರಿಚಯ ಮಾಡಿಕೊಂಡು ದಾಳಿ ವಿಚಾರ ತಿಳಿಸಿ ಪಂಚರಾಗಿ ಸಹಕರಿಸಲು ಮನವಿ ಮಾಡಿಕೊಂಡು ನೋಟಿಸ್ ಜಾರಿ ಮಾಡಿದ್ದು, ನಂತರ ಅಲ್ಲಿಂದ ಮಾಹಿತಿ ಬಂದ ಸ್ಥಳಕ್ಕೆ 7-20 ಗಂಟೆಗೆ ಪಂಚರೊಂದಿಗೆ ತಲುಪಿ ಮಾರಿದಿಬ್ಬದ ಒಂದು ಮನೆಯ ಮುಂಭಾಗದಲ್ಲಿ ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲವನ್ನು ತೆಗೆದುಕೊಂಡು ನಿಂತಿದ್ದು, ನಮ್ಮನ್ನು ನೋಡಿ ಮನೆಯ ಹಿಭಾಗದಲ್ಲಿ ಓಡಿ ಹೋಗಲು ಪ್ರಯತ್ನಿಸಿದ್ದು, ಚಾಸಾ-4 ರವರು ಆತನನ್ನು ಹಿಡಿದು ನನ್ನ ಮುಂದೆ

ಹಾಜರುಪಡಿಸಿದ್ದು, ನಂತರ ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಮಂಜುನಾಥ್ ಬಿನ್ ರಾಮಸ್ವಾಮಿ ಎಂದು ತಿಳಿಸಿದ್ದು, ಪಂಚರ ಸಮಕ್ಷಮದಲ್ಲಿ ಪ್ಲಾಸ್ಟಿಕ್ ಚೀಲದಲ್ಲಿರುವ ಮದ್ಯದ ಪೌಚುಗಳನ್ನು ಸುರಿದು ಪರಿಶೀಲಿಸಿದಾಗ ಅದರಲ್ಲಿ 90 ಎಂ ಎಲ್ ನ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 30 ಪೌಚುಗಳು ಇದ್ದು, ಅವುಗಳ ಅಂದಾಜು ಮೌಲ್ಯ 1054/- ರೂಪಾಯಿಗಳು ಎಂದು ಪಂಚರು ಅಭಿಪ್ರಾಯ ಪಟ್ಟಿರುತ್ತಾರೆ. ನಂತರ ಸದರಿ ಮದ್ಯವನ್ನು ಮಾರಾಟ ಮಾಡಲು ಯಾವುದಾದರೂ ಪರವಾನಗಿ ಇದೆಯೇ ಎಂದು ಕೇಳಲಾಗಿ ಸಾಕ್ಷಿ ಇಲ್ಲ ಎಂದು ತಿಳಿಸಿದ್ದು, ಅಕ್ರಮವಾಗಿ ಮದ್ಯ ಮಾರಾಟ ಮಾಡಲು ಬಂದಿರುವುದಾಗಿ ತಿಳಿಸಿರುತ್ತಾರೆ. ನಂತರ ಚಾಸಾ-4 ರವರ ಹಸ್ತ 7-30 ರಿಂದ 7-50 ರವರೆಗೆ ಅಲ್ಲಿಯೇ ವರದಿಯನ್ನು ತಯಾರಿಸಿ ಮುಂದಿನ ಕ್ರಮಕ್ಕಾಗಿ ಚಾಸಾ-4 ರವರ ಹಸ್ತ ಪ್ರಕರಣ ದಾಖಲಿಸುವಂತೆ ಠಾಣೆಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಪ್ರಕರಣ 8-00 ಗಂಟೆಗೆ ದಾಖಲಾದ ನಂತರ ಪಂಚರ ಸಮಕ್ಷಮ ರಾತ್ರಿ 8-10 ರಿಂದ 9-00 ರವರೆಗೆ ಮಹಜರ್ ಕ್ರಮವನ್ನು ಜರುಗಿಸಿ, ಸದರಿ ಮದ್ಯವನ್ನು ಅಮಾನತ್ತುಪಡಿಸಿಕೊಂಡು ಅದನ್ನು ಕೆಂಪು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ದಾರದಿಂದ ಹೊಲೆದು, ಅದಕ್ಕೆ ಅರಗಿನಿಂದ ಎಲ್ ಕೆ ವಿ ಎಂದು ಸೀಲು ಮಾಡಿ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇವೆ. ನಂತರ ರಾತ್ರಿ 9-15 ಗಂಟೆ ಸಮಯಕ್ಕೆ ಠಾಣೆಗೆ ಬಂದು ಆರೋಪಿ, ಮಾಲು ಮತ್ತು ಮಹಜರನ್ನು ಠಾಣಾಧಿಕಾರಿಗಳಿಗೆ ಮುಂದಿನ ಕ್ರಮ ಕೈಗೊಳ್ಳುವಂತೆ ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ವರದಿಯಾಗಿದ್ದು, ಸದರಿ ದಾಖಲೆಯನ್ನು ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ನೋಟೀಸ್ ಆಗಿದ್ದು, ಸದರಿ ದಾಖಲೆಯನ್ನು ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ಛಾಯಚಿತ್ರವನ್ನು ತೋರಿಸಲಾಗಿದ್ದು, ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ನಿಪಿ-4 ರಲ್ಲಿ ಸಾಕ್ಷಿ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಮುದ್ದೆ ಮಾಲುಗಳಾದ ಕೆಂಪು ಬಣ್ಣದ ಕೈ ಚೀಲ ಮತ್ತು 90 ಎಂ ಎಲ್ ನ ಒರಿಜಿನಲ್ ಚಾಯ್ಸ ಡೀಲಕ್ಸ ವಿಸ್ಕಿಯ 30 ಪೌಚುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಎಂ ಒ 1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿತರ ಪರ** ಶ್ರೀ ಎಲ್ ಪಿ ಎಸ್ **ವಕೀಲರಿಂದ.**

ನೀವು ಪಂಚರಿಗೆ ಯಾವುದೇ ನೋಟಿಸ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ನಲ್ಲಿ ಪಂಚರ ಸಹಿಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ ನೀವು ಮಹಜರ್ ಕ್ರಮವನ್ನು ಠಾಣೆಯಲ್ಲಿ ಜರುಗಿಸಿರುತ್ತಿರಾ ಎಂದರೆ ಸರಿಯಲ್ಲ. ಫೋಟೋಗೆ ಸಂಬಂಧಪಟ್ಟ ಸಿಡಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನೀಡಿರುತ್ತೇವೆ ಎಂದು ನುಡಿದಿರುತ್ತಾರೆ. ಆರೋಪಿಯು ಮನೆಯ ಮುಂದೆ ಮದ್ಯ ಮಾರಾಟ ಮಾಡುತ್ತಿದ್ದಾರೆಂದು ನೀವು ತಿಳಿಸಿದ್ದು, ಮನೆಯ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಅದನು್ನ ಮುಂದಿನ ತನಿಖಾಧಿಕಾರಿಗಳು ಮಾಡುತ್ತಾರೆಂದು ನುಡಿದಿರುತ್ತಾರೆ. ಆರೋಪಿಗೂ ನ್ಯಾಯಾಲಯದ ಮುಂದಿರುವ ಮುದ್ದೆ ಮಾಲಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಮ್ಮ ಠಾಣಾ ಅಂಕಿ ಅಂಶಗಳಿಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿದ್ದಿರಾ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**